KAMD510009282015

Presented on : 04-07-2015
Registered on : 04-07-2015
Decided on : 27-04-2026
Duration : 10 years, 9 months, 23 days

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಾಗಮಂಗಲ**

**ಉಪಸ್ಥಿತರುಃ** ಶ್ರೀ ಶಿವರಾಜು ಹೆಚ್.ಎಸ್
ಬಿ.ಎ.ಲಾ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ನಾಗಮಂಗಲ

ದಿನಾಂಕ : 27 ನೇ ಏಪ್ರಿಲ್ 2026

**ಕ್ರಿಮಿನಲ್ ಮೊಕದ್ದಮೆ ಸಂ.260/2015**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ,
ಬೆಳ್ಳೂರು ಪೊಲೀಸ್ ಠಾಣೆ.

**(ಸಹಾಯಕ ಸರ್ಕಾರಿ ಅಭಿಯೋಜಕರು )**

**ವಿರುದ್ಧ**

**ಆರೋಪಿಗಳು** :

1) ಕುಮಾರ ಬಿನ್ ರಾಮೇಗೌಡ ಟಿ,
33 ವರ್ಷ,
ವಾಸಃ ದೇವಿಹಳ್ಳಿ ಗ್ರಾಮ,
ಬೆಳ್ಳೂರು ಹೋಬಳಿ,
ನಾಗಮಂಗಲ ತಾಲ್ಲೂಕು,
ಮಂಡ್ಯ ಜಿಲ್ಲೆ.

2) ಆನಂದ ಬಿನ್ ರಾಜೇಗೌಡ,
25 ವರ್ಷ,
ವಾಸಃ ಗುಂಡೇನಹಳ್ಳಿ ಗ್ರಾಮ,
ಬಿಂಡಿಗೆನವಿಲೆ ಹೋಬಳಿ,
ನಾಗಮಂಗಲ ತಾಲ್ಲೂಕು,
ಮಂಡ್ಯ ಜಿಲ್ಲೆ.

6) ದಯಾಮಣಿ ಕೋಂ ಶಿವಲಿಂಗೇಗೌಡ,
42 ವರ್ಷ,
ವಾಸಃ ಯಳನಹಳ್ಳಿ ಗ್ರಾಮ,
ಹಿರಿಸಾವೆ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

8) ಸವಿತಾ ಕೋಂ ರಂಗಸ್ವಾಮಿ,
32 ವರ್ಷ,
ವಾಸಃ ಕದಬಹಳ್ಳಿ ಗ್ರಾಮ,
ಬಿಂಡಿಗೆನವಿಲೆ ಹೋಬಳಿ,
ನಾಗಮಂಗಲ ತಾಲ್ಲೂಕು,
ಮಂಡ್ಯ ಜಿಲ್ಲೆ.

**(ಶ್ರೀ ಜೆ.ಕೆ.ಆರ್., ವಕೀಲರು)**

| | |
|---|---|
| ಅಪರಾಧ ಸಂಭವಿಸಿದ ದಿನಾಂಕ | 24-09-2014 |
| ಮೊಕದ್ದಮೆ ವರದಿಯಾದ ದಿನಾಂಕ | 17-10-2014 |
| ಪಿರ್ಯಾದುದಾರರ ಹೆಸರು | ಚಿಕ್ಕತಾಯಮ್ಮ ಕೋಂ ರಾಮಕೃಷ್ಣೆಗೌಡ |
| ವಿಚಾರಣೆ ಪ್ರಾರಂಭಿಸಿದ ದಿನಾಂಕ | 09-11-2022 |
| ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ | 09.04.2026 |
| ಆರೋಪಗಳು | ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹ ಕಲಂ 34. |
| ನ್ಯಾಯಾಧೀಶರ ತೀರ್ಮಾನ | ನಿರ್ದೋಷಿಗಳೆಂದು ಪರಿಗಣಿಸಿದೆ |
| ತೀರ್ಮಾನವಾದ ದಿನಾಂಕ | 27.04.2026 |
| ಅವಧಿ | ವರ್ಷ ತಿಂಗಳು ದಿನಗಳು<br>10 09 23 |

**(ಶ್ರೀ ಶಿವರಾಜು ಹೆಚ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾದಿಕಾರಿಗಳ
ನ್ಯಾಯಾಲಯ, ನಾಗಮಂಗಲ

**ತೀರ್ಪು**

ಆರಕ್ಷಕ ಉಪನಿರೀಕ್ಷಕರು, ಬೆಳ್ಳೂರು ಪೊಲೀಸ್ ಠಾಣೆ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿರುತ್ತಾರೆಂದು ಆರೋಪಿಗಳ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ:-

ದಿನಾಂಕ 24-09-2014 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ, ಬೆಳ್ಳೂರು ಪೊಲೀಸ್ ಠಾಣಾ ವ್ಯಾಪ್ತಿಯ ದೇವಿಹಳ್ಳಿ ಗ್ರಾಮದಲ್ಲಿ ಚಾಸಾ 1 ರವರ ಬಾಬ್ತು ಮನೆಯ ಜಾಗದ ವಿಚಾರದಲ್ಲಿ ಹಾಗೂ ಸದರಿ ಮನೆಯ ಮುಂಭಾಗದಲ್ಲಿ ಇದ್ದ ಆರೋಪಿಗಳ ಜಮೀನಿನ ವಿಚಾರದಲ್ಲಿ ವಿವಾದವಿದ್ದು, ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ 1 ರವರ ಬಾಬ್ತು ಮನೆಯ ಹಿಂಭಾಗಕ್ಕೆ ಹೋದದ್ದನ್ನು ಕಂಡ ಚಾಸಾ 2 ರವರು ಕೂತುಹಲದಿಂದ ನಮ್ಮ ಮನೆಯ ಹಿಂದೆ ಏನು ಮಾಡುತ್ತಾರೆಂದು ನೋಡಲು ಹೋದಾಗ ಆರೋಪಿಗಳು ಹಳೆಯ ದ್ವೇಷದಿಂದ ಜಗಳ ತೆಗೆದು 2 ನೇ ಆರೋಪಿ ಚಾಸಾ 2 ರವರನ್ನು ಉದ್ದೇಶಿಸಿ ನಿನ್ನ ತಾಯಿನ ಕೇಯಾ ಎಂದು ಬೈದು, ಕೈಯಿಂದ ಚಾಸಾ 2 ರವರ ಎದೆಗೆ ಗುದ್ದಿದಾಗ ಟ್ರ್ಯಾ ಕ್ಟರ್ ನಲ್ಲಿ ಉಳುಮೆ ಮಾಡುತ್ತಿದ್ದ 1 ನೇ ಆರೋಪಿ ರವರು ಟ್ರ್ಯಾಕ್ಟರ್ ನಿಂದ ಇಳಿದು ಬಂದು ಚಾಸಾ 2 ರವರನ್ನು ಉದ್ದೇಶಿಸಿ ನಿನ್ನದು ಅತಿಯಾಯಿತು ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಅಲ್ಲೆ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ 2

ರವರ ತಲೆಗೆ ಹೊಡೆದು ನೋವುಂಟು ಮಾಡಿದಾಗ 6 ನೇ ಆರೋಪಿ ಕೈಗಳಿಂದ ಚಾಸಾ 2 ರವರ ಮೈಮೇಲೆ ಹೊಡೆದು ಎಳೆದಾಡಿ ಕೆಳಗೆ ಬೀಳಿಸಿದಾಗ 8 ನೇ ಆರೋಪಿ ಕಾಲಿನಿಂದ ಚಾಸಾ 2 ರವರ ಮೈಮೇಲೆಲ್ಲಾ ಒದ್ದು ನೋವುಂಟು ಮಾಡಿದ್ದು ನಂತರ ಆರೋಪಿಗಳೆಲ್ಲರೂ ಚಾಸಾ 2 ರವರನ್ನು ಉದ್ದೇಶಿಸಿ ಈ ದಿನ ಬಚಾವಾದ ಇನ್ನೊಂದು ದಿನ ಸಿಕ್ಕು ನಿನ್ನನ್ನು ಕೊಲೆ ಮಾಡುವುದಾಗಿ ಪ್ರಾಣಬೆದರಿಕೆ ಹಾಕಿರುವುದು ಇದರಿಂದ ಚಾಸಾ 2 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳುಂಟಾಗಿರುವುದು ಪಿರ್ಯಾದುದಾರರು ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರನ್ನು ಸಲ್ಲಿಸಿರುತ್ತಾರೆ.

3. ಬೆಳ್ಳೂರು ಪೊಲೀಸರು ಪಿರ್ಯಾದುದಾರರು ನೀಡಿದ ದೂರಿನ ಆಧಾರದ ಮೇಲೆ ಆರೋಪಿತರ ವಿರುದ್ಧ ಠಾಣಾ ಮೊಕದ್ದಮೆ ಸಂಖ್ಯೆ 270/2014 ದಿನಾಂಕ 17.10.2014 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣದ ತನಿಖಾಧಿಕಾರಿಗಳು ತನಿಖೆ ಮುಂದುವರೆಸಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಘಟನಾ ಸ್ಥಳದ ಪಂಚನಾಮೆ ಜರುಗಿಸಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು, ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 324, 504 ಮತ್ತು 506 ಸಹ ಕಲಂ 34 ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

4. ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಈ ನ್ಯಾಯಾಲಯವು ಪ್ರಕರಣವನ್ನು ಸಂಜ್ಞೆಗೆ ತೆಗೆದುಕೊಂಡು ಆರೋಪಿತರಿಗೆ ಆಜ್ಞಾ-ಪತ್ರಿಕೆಯನ್ನು ನೀಡಲಾಗಿ ಆರೋಪಿತರು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಪಡೆದಿರುತ್ತಾರೆ. ಆ ನಂತರ,

ದೋಷಾರೋಪಣಾ ಪಟ್ಟಿ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ಆರೋಪಿತರಿಗೆ ನೀಡಿದ್ದು, ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು ಎಂದು ಕೇಳಿಕೊಂಡ ಮೇರೆಗೆ ಅಭಿಯೋಜನೆಯ ಪರವಾಗಿ ಸಾಕ್ಷಿಗಳ ವಿಚಾರಣೆ ಮಾಡಲಾಗಿರುತ್ತದೆ.

5. ಅಭಿಯೋಜನೆಯ ಪರ ಸಾಕ್ಷಿದಾರರಾಗಿ ಪ್ರಾ.ಸಾ-1 ಮತ್ತು 2 ರವರನ್ನು ವಿಚಾರಣೆಗೆ ಒಳಪಡಿಸಲಾಯಿತು ಹಾಗೂ ನಿ.ಪಿ.1 ರಿಂದ 4 ದಾಖಲಾತಿಗಳನ್ನು ಗುರುತಿಸಲಾಯಿತು. ಸದರಿ ಮೊಕದ್ದಮ್ಮೆಯಲ್ಲಿ ಪ್ರಾ.ಸಾ-1 ಮತ್ತು 2 ರವರು ಅಭಿಯೋಜನೆಯ ಮೊಕದ್ದಮ್ಮೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಆಜ್ಞಾ-ಪತ್ರವನ್ನು ಹೊರಡಿಸುವಂತೆ ಕೋರಿದ್ದರು. ಆದರೆ, ಪ್ರಕರಣದ ಪಿರ್ಯಾದುದಾರರು/ಗಾಯಾಳು ಸಾಕ್ಷಿದಾರರು ಅಭಿಯೋಜನೆಯ ಮೊಕದ್ದಮ್ಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂಬುದನ್ನು ಪರಿಗಣಿಸಿ ಅಭಿಯೋಜನೆಯ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಯಿತು.

6. ಅಭಿಯೋಜನೆಯ ಪರ ವಿಚಾರಣೆ ಮಾಡಲಾದಂತಹ ಸಾಕ್ಷಿದಾರರ ವಿಚಾರಣೆಯಲ್ಲಿ ಆರೋಪಿತರಿಗೆ ವಿರುದ್ಧವಾಗಿರುವಂತಹ ಯಾವುದೇ ಸಾಕ್ಷ್ಯಗಳು ಕಂಡು ಬರದೇ ಇರುವ

ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಹೇಳಿರುವಂತೆ ಆರೋಪಿತರ ಹೇಳಿಕೆಗಳನ್ನು ದಾಖಲು ಮಾಡುವುದನ್ನು ಕೈ ಬಿಡಲಾಗಿರುತ್ತದೆ. ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷಿಗಳನ್ನು ಈ ಪ್ರಕರಣದಲ್ಲಿ ವಿಚಾರಣೆ ಮಾಡಿರುವುದಿಲ್ಲ.

7. ಉಭಯ ಪಕ್ಷಗಳ ಪರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರ ಹಾಗೂ ಆರೋಪಿತರ ಪರ ಮಾನ್ಯ ವಕೀಲರ ವಾದ ವಿವಾದಗಳನ್ನು ಕೇಳಲಾಯಿತು ಹಾಗೂ ಪ್ರಕರಣದ ಕಡತಗಳನ್ನು ಪರೀಶೀಲಿಸಲಾಯಿತು.

8. ಈ ಪ್ರಕರಣದಲ್ಲಿ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ:-

<u>ಅಂಶಗಳು</u>

1. ಬೆಳ್ಳೂರು ಪೊಲೀಸ್ ಠಾಣಾ ವ್ಯಾಪ್ತಿಯ ದೇವಿಹಳ್ಳಿ ಗ್ರಾಮದಲ್ಲಿ ಚಾಸಾ 1 ಚಿಕ್ಕತಾಯಮ್ಮರವರ ಮನೆಯ ಜಾಗದ ವಿಚಾರದಲ್ಲಿ ಹಾಗೂ ಸದರಿ ಮನೆಯ ಹಿಂಭಾಗದಲ್ಲಿ ಇದ್ದ ಆರೋಪಿತರು ಜಮೀನಿನ ವಿಚಾರದಲ್ಲಿ ವಿವಾದವಿದ್ದು ದಿನಾಂಕ: 24.09.2014 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ಆರೋಪಿಗಳು ಏಕೋದ್ದೇಶದಿಂದ ಚಾಸಾ 1 ರವರ ಮನೆಯ ಹಿಂಭಾಗಕ್ಕೆ ಹೋದದ್ದನ್ನು ಕಂಡ ಚಾಸಾ 2 ಮಂಜುನಾಥರವರು ಕುತೂಹಲದಿಂದ ತಮ್ಮ ಮನೆಯ ಹಿಂದೆ ಏನು ಮಾಡುತ್ತಾರೆಂದು ನೋಡಲು ಹೋದಾಗ ಆರೋಪಿತರು ಹಳೆಯ ದ್ವೇಷದಿಂದ ಜಗಳ ತೆಗೆದು 2 ನೇ ಆರೋಪಿ ಆನಂದ ಚಾಸಾ 2 ರವರನ್ನು ಉದ್ದೇಶಿಸಿ ನಿನ್ನ ತಾಯಿನ ಕೇಯ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 504 ಸಹ ಕಲಂ 34

ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ, 2 ನೇ ಆರೋಪಿ ಆನಂದ ಕೈಯಿಂದ ಚಾಸಾ 2 ರವರ ಎದೆಗೆ ಗುದ್ದಿ, 6 ನೇ ಆರೋಪಿ ದಯಾಮಣಿ ಕೈಗಳಿಂದ ಚಾಸಾ 2 ರವರ ಮೈಮೇಲೆ ಹೊಡೆದು ಎಳೆದು ಕೆಳಗೆ ಬೀಳಿಸಿದ್ದು, 8 ನೇ ಆರೋಪಿ ಸವಿತಾ ಕಾಲಿನಿಂದ ಚಾಸಾ 2 ರವರ ಮೈಮೇಲೆ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 323 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ, ಟ್ರ್ಯಾಕ್ಟರ್ ನಲ್ಲಿ ಉಳುಮೆ ಮಾಡುತ್ತಿದ್ದ 1 ನೇ ಆರೋಪಿ ಕುಮಾರ ಟ್ರ್ಯಾಕ್ಟರ್ ನಿಂದ ಇಳಿದು ಬಂದು ಚಾಸಾ 1 ರವರನ್ನು ಉದ್ದೇಶಿಸಿ ನಿನ್ನದು ಅತಿಯಾಯಿತು ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಅಲ್ಲೇ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ 2 ರವರ ತಲೆಗೆ ಹೊಡೆದು ತೀವ್ರ ಸ್ವರೂಪದ ನೋವುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 324 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ

ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ, ಚಾಸಾ 2 ರವರನ್ನು ಉದ್ದೇಶಿಸಿ ಈ ದಿನ ಬಚಾವಾದೆ ಇನ್ನೊದು ದಿನ ಸಿಗು ನಿನ್ನನ್ನು ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿದ್ದು ಆ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂಬ ಅಂಶವನ್ನು ಅಭಿಯೋಜನಾ ಪಕ್ಷದವರು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

5. ಏನು ಆದೇಶ ಅಥವಾ ಶಿಕ್ಷೆ?

9. ಆಭಿಯೋಜನಾ ಪಕ್ಷದವರ ಪರ ಹಾಜರು ಪಡಿಸಲಾದಂತಹ ಮೌಖಿಕ ಸಾಕ್ಷ್ಯಗಳನ್ನು, ದಾಖಲೆಗಳನ್ನು ಮತ್ತು ಉಭಯ ಪಕ್ಷಗಳ ಪರ ಮಾನ್ಯ ವಕೀಲರುಗಳ ವಾದವನ್ನು ಸಂಪೂರ್ಣವಾಗಿ ಪರಿಗಣಿಸಿ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆಃ-

ಅಂಶ 1 ರಿಂದ 4 : ನಕಾರಾತ್ಮಕವಾಗಿ,
ಅಂಶ 5 : ಅಂತಿಮ ಆದೇಶನುಸಾರವಾಗಿಃ-

**<u>ಕಾರಣಗಳು</u>**

10. **<u>ಅಂಶ -1 ರಿಂದ 4</u>**:- ಸಂಗತಿಗಳ ಪುನಾರಾವರ್ತನೆಯನ್ನು ತಪ್ಪಿಸಲು ಅಂಶ 1 ರಿಂದ 4 ನ್ನು ಒಟ್ಟಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

11. ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಫಿರ್ಯಾದುದಾರ/ಸಂತ್ರಸ್ತ ಪ್ರಾ.ಸಾ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ 2 ತನ್ನ ಮಗ. ಚಾಸಾ 3 ಮತ್ತು 4 ತಮ್ಮ ಗ್ರಾಮಸ್ಥರು. ಚಾಸಾ 5 ತನ್ನ ಮೈದುನ. ಆರೋಪಿತರು ತಮ್ಮ ಪಕ್ಕದ ಮನೆಯವರು. ದಿನಾಂಕ 24-09-2014 ರಂದು ಬೆಳಿಗ್ಗೆ 11-30 ರ ಸುಮಾರಿಗೆ ಗ್ರಾಮ ದೇವರ ಹಬ್ಬ ಇತ್ತು. ತಮ್ಮ ಮನೆಯ ಬಳಿ ಬಲಿ ಕೊಡುತ್ತಿದ್ದರು ಆಗ ಗ್ರಾಮದವರೆಲ್ಲಾ ಅಲ್ಲಿ ಇದ್ದರು. ಆ ಸಮಯದಲ್ಲಿ ತನ್ನ ಮಗ ಮನೆಯಲ್ಲಿದ್ದ. ತಾನು ಆಸ್ಪತ್ರೆಯಲ್ಲಿದ್ದೆ. ಕುಮಾರ್ ಎಂಬುವವರು ಟ್ರ್ಯಾಕ್ಟರ್ ನಲ್ಲಿ ತಮ್ಮ ಮನೆಯ ಗೋಡೆಗೆ ಗುದ್ದಿಸಿದ್ದರು. ಆಗ ತನ್ನ ಮಗ ಕೇಳಲು ಹೋದಾಗ ಹಬ್ಬಕ್ಕೆ ಬಂದಿದ್ದ ಕುಮಾರ್, ಆನಂದ್, ನಾಗರತ್ನ, ದಯಾಮಣಿ, ಪಾರ್ವತಿ, ಹೇಮಾ, ಶಾರದ, ಮಹಾಲಕ್ಷ್ಮಿ, ಸವಿತಾರವರು ಸೇರಿ ತನ್ನ ಮಗನ ಜೊತೆ ಜಗಳ ತೆಗೆದು ಹೊಡೆದಿರುತ್ತಾರೆ. ವಿಷಯ ತಿಳಿದು ತಾನು 5 ನಿಮಿಷದಲ್ಲಿ ಮನೆಯ ಬಳಿ ಬಂದೆ. ತಾನು ಬರುವಷ್ಟರಲ್ಲಿ ಗ್ರಾಮಸ್ಥರೆಲ್ಲರೂ ಸೇರಿ ತನ್ನ ಮಗನನ್ನು ಬಿಡಿಸಿದಾಗ ಆನಂದ್ ಎಂಬುವವರು ಇವತ್ತು ಬದುಕಿಕೊಂಡಿದ್ದೀಯಾ, ನಿನಗೆ ಮುಂದೆ ಇದೆ ಎಂದು ನನ್ನ ಮಗನಿಗೆ ಬೆದರಿಕೆ ಹಾಕಿದ್ದರು ಎಂದು ತಿಳಿಯಿತು. ತಾನು ಆನಂದ್ ರವರ ಅಮ್ಮನ ಬಳಿ ಹೋಗಿ ಈ ಜಗಳವೆಲ್ಲಾ ಬೇಡವೆಂದು ಹೇಳಿದಾಗ ಆನಂದ್ ರವರು ಕೆಟ್ಟ ಶಬ್ದಗಳಿಂದ ತಾಯಿ, ಅಮ್ಮ ಎಂದೆಲ್ಲಾ ಬಳಸಿ ಬೈದನು. ತನ್ನ ಮಗನಿಗೆ ತಲೆಗೆ ಎದೆಗೆ ಏಟು ಬಿದ್ದಿತ್ತು, ಮೈ - ಕೈ ಎಲ್ಲಾ ತರಚಿ ಗಾಯವಾಗಿತ್ತು, ತಾನು ತಕ್ಷಣವೆ ತನ್ನ ಮಗನನ್ನ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಪ್ರಾಸಾ 1 ರವರು ಮುಂದುವರೆದು ನ್ಯಾಯಾಲಯದ ಮುಂದೆ ಇರುವ ಆರೋಪಿಯು ತಮ್ಮ ಊರಿನವರು. ತಾನು ಆರೋಪಿತರು ವಿರದ್ದ ಯಾವುದೇ

ದೂರು ಸಲ್ಲಿಸಿಲ್ಲ ಹಾಗೂ ದೂರಿನಲ್ಲಿರುವ ವಿಷಯ ತನಗೆ ಗೊತ್ತಿಲ್ಲ. ಪೋಲಿಸರ ಹೇಳಿಕೆಯ ಮೇರೆಗೆ ತಾನು ದಾಖಲಾತಿಯ ಮೇಲೆ ಸಹಿ ಮಾಡಿದ್ದೇನೆ. ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ತನಗೆ ಗೊತ್ತಿಲ್ಲ. ಆರೋಪಿತರು ತನಗೆ ದೊಣ್ಣೆಯಿಂದ ಹೊಡೆದಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ತಾನು ಪೋಲೀಸರಿಗೆ ಯಾವುದೇ ಮುಂದುವರೆದ ಹೇಳಿಕೆ ನೀಡಿಲ್ಲ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಸಹಾ ಪ್ರಾ.ಸಾ-1 ರವರು ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಸಾಕ್ಷಿದಾರರು ಅಭಿಯೋಜನೆ ಪರವಾಗಿ ಯಾವುದೇ ಸಾಕ್ಷ್ಯವನ್ನು ನೀಡಿಲ್ಲದ ಕಾರಣ ಆರೋಪಿತರ ವಿರುದ್ದ ಹೊರಿಸಿದ ಆರೋಪಗಳನ್ನು ಸಾಬೀತು ಮಾಡಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

12. ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಸಂತ್ರಸ್ತ ಪ್ರಾ.ಸಾ.2 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿಯು ತಮ್ಮ ಊರಿನವರು. ಚಾಸಾ 1 ತನ್ನ ತಾಯಿ. ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಜಗಳ ನಡೆದಿಲ್ಲ. ಆರೋಪಿತರು ತಮಗೆ ಹಲ್ಲೆ ನಡೆಸಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ. ಪ್ರಾಣ ಬೆದರಿಕೆ ಹಾಕಿಲ್ಲ. ತನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿದರೆ ಗುರುತಿಸಲಾಗುವುಲ್ಲ. ತಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಸಹಾ ಪ್ರಾ.ಸಾ-2 ರವರು ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಸದರಿ ಸಾಕ್ಷಿದಾರರು ಅಭಿಯೋಜನೆ ಪರವಾಗಿ ಯಾವುದೇ ಸಾಕ್ಷ್ಯವನ್ನು ನೀಡಿಲ್ಲದ ಕಾರಣ ಆರೋಪಿತರ ವಿರುದ್ದ ಹೊರಿಸಿದ ಆರೋಪಗಳನ್ನು ಸಾಬೀತು ಮಾಡಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

13. ಸದರಿ ಸಾಕ್ಷಿದಾರರು ಅಭಿಯೋಜನೆಯ ಪರವಾಗಿ ಯಾವುದೇ ಸಾಕ್ಷ್ಯವನ್ನು ನೀಡಿಲ್ಲದ ಕಾರಣ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳನ್ನು ಸಾಬೀತು ಮಾಡಲು ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸುವಂತೆ ಕೋರಿದ್ದರು. ಆದರೆ, ಪ್ರಕರಣದ ಪಿರ್ಯಾದುದಾರರು/ಸಂತ್ರಸ್ತರಾದ ಪ್ರಾಸಾ 1 ಮತ್ತು 2 ರವರು ಅಭಿಯೋಜನೆಯ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರನ್ನು ಕರೆಯಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಪರಿಗಣಿಸಿ ಅಭಿಯೋಜನೆಯ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿದೆ.

14. ಈ ಪ್ರಕರಣದಲ್ಲಿ ಅಭಿಯೋಜನೆಯು ಪ್ರಾಸಾ-1 ಮತ್ತು 2 ರವರನ್ನು ಪಾಟೀ-ಸವಾಲಿಗೆ ಒಳಪಡಿಸಿದಾಗ ಆರೋಪಿತರೊಂದಿಗೆ ತಾನು ಸದರಿ ಪ್ರಕರಣ ಹಾಗೂ ಸಿ ಸಿ ಸಂಖ್ಯೆ 260/2015 ರ ಎದುರು ಪ್ರಕರಣವನ್ನೂ ಸಹ ರಾಜಿ ಮಾಡಿಕೊಂಡಿರುವುದನ್ನು ಒಪ್ಪಿಕೊಂಡಿರುತ್ತಾರೆ.

15. ಈ ಪ್ರಕರಣದಲ್ಲಿ ಪ್ರಾ.ಸಾ-1 ಮತ್ತು 2 ಇವರು ಪಿರ್ಯಾದುದಾರು ಹಾಗೂ ನೊಂದ ಸಾಕ್ಷಿದಾರರಾಗಿದ್ದು ಇವರು ಅಭಿಯೋಜನೆಯ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿತರು ಮತ್ತು ದೂರುದಾರರು ರಾಜಿಯಾಗಿದ್ದು, ದೂರುದಾರರು ತನ್ನ ದೂರಿನ ಅಂಶಗಳಿಗೆ ಮತ್ತು ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ, ಅಭಿಯೋಜನೆಯು ಪಿರ್ಯಾದಿಯಲ್ಲಿ ನಮೂದಿಸಿರುವ ಅಂಶಗಳನ್ನು ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತಾರೆ. ಅಭಿಯೋಜನೆಯ ಸಾಕ್ಷ್ಯದಲ್ಲಿ ಆರೋಪಿತರ ಮೇಲೆ ಆರೋಪಿಸಿದ ಅಪರಾಧಗಳನ್ನು ಮಾಡಿದ್ದಾರೆಂದು ರುಜುವಾತುಪಡಿಸುವ ಯಾವುದೇ ಸಾಕ್ಷ್ಯದಾರಗಳು ಇಲ್ಲ. ಈ ಮೇಲ್ಕಂಡ ಕಾರಣಗಳಿಗಾಗಿ ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಿದ ಆರೋಪಗಳನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿದೆ. ***ಆದ್ದರಿಂದ ಅಂಶ 1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.***

16. **<u>ಅಂಶ. 5</u>**:- ಅಂಶ 1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆಃ-

**<u>ಆದೇಶ</u>**

ಆರೋಪಿಗಳನ್ನು ನಿರಪರಾಧಿಗಳೆಂದು ತೀರ್ಮಾನಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಆಧಿಕಾರದ ಮೇರೆಗೆ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ. 323, 324, 504 ಮತ್ತು 506 ಸಹ ಕಲಂ 34 ರಡಿಯಲ್ಲಿ ಅಪರಾಧಕ್ಕಾಗಿ ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437 ರೀತ್ಯ 6 ತಿಂಗಳ ನಂತರ ರದ್ದು ಪಡಿಸಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಪಿ.ಎಫ್. ನಂ.226/2014 ರಡಿ ದಿನಾಂಕ 18.10.2014 ರಂದು ಅಮಾನತ್ತು ಪಡಿಸಿಕೊಂಡಿರುವ ವಸ್ತುವನ್ನು ಸೂಕ್ತ ಕಾನೂನು ಪ್ರಕ್ರಿಯೆಗಳನ್ನು ಪಾಲಿಸಿ, ಮೇಲ್ಮನವಿಯ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಅಥವಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಲು ಅಥವಾ ಮಾಲೀಕರಿಗೆ ಹಿಂತಿರುಗಿಸಲು ಆದೇಶಿಸಿ ಸಂಬಂಧಪಟ್ಟ ಪೋಲೀಸ್ ಠಾಣೆಗೆ ಹಿಂತಿರುಗಿಸುವಂತೆ ಈ ಮೂಲಕ ಆದೇಶಿಸಲಾಗಿರುತ್ತದೆ.

(ಶೀಘ್ರಲಿಪಿಗಾರರು ನನ್ನ ಉಕ್ತ ಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ, ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ **27 ನೇ ಏಪ್ರಿಲ್ 2026** ರಂದು ತೀರ್ಪನ್ನು ಘೋಷಿಸಲಾಯಿತು.)

**(ಶ್ರೀ ಶಿವರಾಜು ಹೆಚ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾದಿಕಾರಿಗಳ ನ್ಯಾಯಾಲಯ,
ನಾಗಮಂಗಲ.

**<u>ಅನುಬಂಧ</u>**

**<u>ಅಭಿಯೋಜನೆಯವರ ಪರ ಸಾಕ್ಷಿದಾರರ ಪಟ್ಟಿ</u>:-**

ಪ್ರಾ.ಸಾ-1 : ಚಿಕ್ಕತಾಯಮ್ಮ

ಪ್ರಾ.ಸಾ-2 : ಮಂಜುನಾಥ ಪ್ರಸಾದ್

**<u>ಅಭಿಯೋಜನೆಯವರ ಪರ  ದಾಖಲೆಗಳ ಪಟ್ಟಿ</u>:-**

ನಿ.ಪಿ.-1 : ಹೇಳಿಕೆ (ದೂರು),

ನಿ.ಪಿ.-1(ಎ) : ಪ್ರಾಸಾ-1 ರವರ ಸಹಿ,

ನಿ.ಪಿ.-2 : ಪ್ರಾಸಾ-1 ರವರ ಹೇಳಿಕೆ

ನಿ.ಪಿ.-3 : ಸ್ಥಳ ಪಂಚನಾಮೆ,

ನಿ.ಪಿ.-3(ಎ) : ಪ್ರಾಸಾ-2 ರವರ ಸಹಿ.

ನಿ.ಪಿ.-4 : ಪ್ರಾಸಾ-2 ರವರ ಹೇಳಿಕೆ

**<u>ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು</u>:-**

ಇಲ್ಲ

**<u>ಆರೋಪಿತರ ಪರ ದಾಖಲೆಗಳ ಪಟ್ಟಿ</u>:-**

ಇಲ್ಲ

**(ಶ್ರೀ ಶಿವರಾಜು ಹೆಚ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾದಿಕಾರಿಗಳ ನ್ಯಾಯಾಲಯ,
ನಾಗಮಂಗಲ.

******